ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ DATE 21/02/2020

# ಪ್ರತಿಪಕ್ಷದ ಸದಸ್ಯರಿಗೆ ಗೃಹ ಸಚಿವರ ಸ್ಪಷ್ಟನೆ

**ವಿಧಾನ ಪರಿಷತ್:** ಪ್ರತಿಪಕ್ಷ ಸದಸ್ಯರ ಮನವರಿಕೆಗೆ ಗೃಹಸಚಿವ ಬಸವರಾಜ್ ಬೊಮ್ಮಾಯಿ ಪ್ರಯತ್ನ ಮುಂದುವರಿಸಿದರು.

ಕಳೆದ ಎರಡು ದಿನಗಳಿಂದ ಕಾನೂನು ಸುವ್ಯವಸ್ಥೆ ಅಡಿ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಮಂಡಿಸಿದ ನಿಲುವಳಿ ಸೂಚನೆ ಮೇಲಿನ ಚರ್ಚೆಯಲ್ಲಿ ಮಂಡನೆ ಯಾದ ವಿಚಾರಗಳಿಗೆ ಉತ್ತರ ನೀಡಿದ ಅವರು, ಎಲ್ಲ ಕಡೆ ಗಲಾಟೆ ನಿಯಂತ್ರಿಸಲು ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ನೂರಾರು ಟೀಯರ್ ಗ್ಯಾಸ್, ರಬ್ಬರ್ ಬುಲೆಟ್, ಗಾಳಿಯಲ್ಲಿ ಗುಂಡು ಹಾರಿಸಿದರೂ ಪೆಟ್ರೋಲ್ ಬಾಂಬ್ ಹಿಡಿದು ದಾಳಿಗೆ ಮುಂದಾದಾಗ ಅನಿವಾರ್ಯವಾಗಿ ಗೋಲಿಬಾರ್ ನಡೆಸಬೇಕಾಯಿತು. ಮಂಗಳೂರಿನಲ್ಲಿ ಪೊಲೀಸರು ತಪ್ಪು ಮಾಡಿಲ್ಲ. ಬದಲಾಗಿ ಸಮರ್ಥವಾಗಿ ನಿಭಾಯಿಸಿದ್ದಾರೆ. ನನ್ನ ಮಾಹಿತಿ ನಾನು ನೀಡುತ್ತಿದ್ದು, ನನ್ನ ಮಾಹಿತಿ ನಂತರ ಬೇರೆಯವರು ಮಾತನಾಡಬಹುದು ಎಂದರು.

## ತಪ್ಪಿತಸ್ಥರ ವಿರುದ್ಧ ಕ್ರಮ

**ಕಾಂಗ್ರೆಸ್‌ನ ನಾರಾಯಣಸ್ವಾಮಿ ಅವರಿಗೆ ಸ್ಪಷ್ಟನೆ ನೀಡಿದ ಬೊಮ್ಮಾಯಿ, ಇತ್ತೀಚೆಗೆ ಬೈರತಿ ಬಸವರಾಜ್ ಅವರಿಗೆ ಮೂವರು ಪೊಲೀಸರು ಬೆಳ್ಳಿಗದೆ ನೀಡಿ ಜನ್ಮದಿನದಂದು ಸಂಭ್ರಮಾಚ ರಣೆ ಮಾಡಿದ್ದನ್ನು ಪ್ರಸ್ತಾಪಿಸಿದ್ದೀರಿ. ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಸಾಕ್ಷಿ ಸಂಗ್ರಹಿಸಿ ತನಿಖೆ ಮಾಡುವಂತೆ ಹೇಳಿದ್ದೇನೆ. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತೇವೆ ಎಂದರು.**

**ಪ್ರತಿಪಕ್ಷ ವಾಕ್ ಔಟ್:** ರಾಜ್ಯ ಸರಕಾರದ ಉತ್ತರ ಸಮಾಧಾನ ತಂದಿಲ್ಲ. ಸದನ ಸಮಿತಿಗೆ ಇಲ್ಲವೇ ನ್ಯಾಯಾಂಗ ತನಿಖೆಗೆ ಒಪ್ಪಿಲ್ಲ. ಸರಕಾರದ ನಿಲುವನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತೇವೆ ಎಂದು ಹೇಳಿ ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ತೆರಳಿದರು. ಇವರ ಬೆನ್ನಲ್ಲೇ ಜೆಡಿಎಸ್ ಸದಸ್ಯರೂ ಸಭಾತ್ಯಾಗ ಮಾಡಿದರು.

# ರಾಜ್ಯಪಾಲರ ಭಾಷಣದ ಚರ್ಚೆಗೆ ಅವಕಾಶ



**ವಿಧಾನ ಪರಿಷತ್:** ವಿಧಾನ ಪರಿಷತ್‌ನಲ್ಲಿ ರಾಜ್ಯ ಪಾಲರ ಭಾಷಣದ ಮೇಲಿನ ಚರ್ಚೆ ಆರಂಭವಾಯಿತು.

ರಾಜ್ಯಪಾಲರ ಭಾಷಣ ಮೇಲಿನ ಚರ್ಚೆ ಕರೆದ ಹಿನ್ನೆಲೆ ಕಲಾಪಕ್ಕೆ ಮರಳಿದ ಪ್ರತಿಪಕ್ಷ ಸದಸ್ಯರು ಆರಂಭದಲ್ಲೇ ಎನ್‌ಆರ್‌ಸಿ ವಿಚಾರವಾಗಿ ಗದ್ದಲ ಆರಂಭಿಸಿದರು. ಆಗ ಆಡಳಿತ ಪಕ್ಷ ಸದಸ್ಯರು ವಿರೋಧಿಸಿದರು. ಸಾಕಷ್ಟು ವಾಗ್ವಾದ ಸದನದಲ್ಲಿ ಕಂಡು ಬಂತು. ಬಿಜೆಪಿ ಸದಸ್ಯ ರವಿಕುಮಾರ್ ಮಾತು ಆರಂಭಿಸುತ್ತಿದ್ದಂತೆ ವಾಗ್ವಾದ ಆರಂಭವಾದವು. ರಾಜ್ಯದ ಬಗ್ಗೆ ಮಾತ್ರ ಮಾತನಾಡಬೇಕು, ರಾಷ್ಟ್ರಮಟ್ಟದ ವಿಚಾರದ ಪ್ರಸ್ತಾಪ ರಾಜ್ಯಪಾಲರ ಭಾಷಣದ ಚರ್ಚೆ ಅಡಿ ಬೇಡ ಎಂದು ಪ್ರತಿಪಕ್ಷ ಸದಸ್ಯರು ಆಗ್ರಹಿಸಿದರು.

ಮಾತು ಮುಂದುವರಿಸಿದ ರವಿಕುಮಾರ್, ಮತ್ತೆ ಸಿಎಎ, ಎನ್‌ಆರ್‌ಸಿ ಪ್ರಸ್ತಾಪಿಸಿದಾಗ, ಪ್ರತಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಮಾತನಾಡಿ, ರಾಜ್ಯಪಾಲರ ಭಾಷಣಕ್ಕೆ ಸೀಮಿತವಾಗಿ ಮಾತನಾಡುವುದು ಒಳಿತು ಎಂದರು. ಅದಕ್ಕೆ ಸಭಾಪತಿಗಳು ಕೂಡ ಅನುಮೋದನೆ ನೀಡಿದರು. ಮಾ.2 ರಿಂದ ಸಂವಿಧಾನದ ಮೇಲಿನ ಚರ್ಚೆ ಮೇಲೆಯೇ ಮಾತನಾಡಲು ಅವಕಾಶ ಇದೆ. ಆಗ ಅವಕಾಶ ಬಳಸಿಕೊಳ್ಳಿ ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಆಡಳಿತ ಪಕ್ಷದ ನಾಯಕ ಕೋಟ ಶ್ರೀನಿವಾಸ್ ಪೂಜಾರಿ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಸೀಮಿತ ಮಾಡುವುದು ಸರಿಯಲ್ಲ. ಕಾನೂನು ಸುವ್ಯವಸ್ಥೆ ಚರ್ಚೆ ಬರುತ್ತದೆ ಎಂದು ಸಮಜಾಯಿಷಿ ನೀಡಿದರು.

ರಾಜ್ಯಪಾಲರ ಭಾಷಣದ 20 ಪುಟದ ಮೇಲೆ ಚರ್ಚೆ ಆಗಲಿ ಎಂದು ಪ್ರತಿಪಕ್ಷ ಹೇಳಿದರೆ, ಅವರ ಭಾಷಣದ ವಿಚಾರ ಸೀಮಿತವಾಗಿಸುವುದು ಸರಿಯಲ್ಲ ಎಂದು ಆಡಳಿತ ಪಕ್ಷ ಸದಸ್ಯರು ಹೇಳಿದರು. ಗಲಾಟೆ ಮಧ್ಯವೇ ಭಾಷಣ ಮುಂದುವರಿಸಿದ ರವಿಕುಮಾರ್, ಸಿಎಂ ಬಿ.ಎಸ್.ಯಡಿಯೂರಪ್ಪ ಗುಣಗಾನ ಮಾಡಿದರು. ಪ್ರವಾಹವನ್ನು ಸಮರ್ಥವಾಗಿ ನಿಭಾಯಿಸಿದರು ಎಂದರು. ಬಡವರ ಕಣ್ಣೀರು ಒರೆಸುವ ಮೊದಲ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು ಎಂದರು.

ಸಂಪುಟ ರಚನೆ, ವಿಸ್ತರಣೆ ಆಗಲ್ಲ ಎಂದಿದ್ದರು. ಆದರೆ ಸಮಸ್ಯೆ ಇಲ್ಲದೇ ಮಾಡಿದರು. ರಾಜ್ಯದಲ್ಲಿ ಸುಭದ್ರ ಸರಕಾರ ಇದೆ ಎಂದು ಹೇಳಿದರು. ಅಂಗನವಾಡಿ, ಆಶಾ ಕಾರ್ಯಕರ್ತೆಯರ ವೇತನ ಹೆಚ್ಚಿಸಲಾಗಿದೆ. ಕಾನೂನು ಸುವ್ಯವಸ್ಥೆ ಎಲ್ಲ ಕಡೆ ಸಮರ್ಥವಾಗಿ ಪಾಲನೆಯಾಗಿದೆ ಎಂದರು. ಪ್ರಧಾನ ಮಂತ್ರಿಗಳಿಗೆ ಚಪ್ಪಲಿಯಿಂದ ಹೊಡೆಸಬೇಕೆಂದು ಮಕ್ಕಳ ಕೈಲಿ ಹೇಳಿಸಲಾಗಿದೆ ಎಂದಿದ್ದಕ್ಕೆ, ಹಾಗೆ ಹೇಳಿಲ್ಲ, ಸದನಕ್ಕೆ ತಪ್ಪು ಸಂದೇಶ ಹೋಗುವುದು ಬೇಡ ಎಂದು ಪ್ರತಿಪಕ್ಷ ಸದಸ್ಯರು ಆಕ್ರೋಶ ಹೊರಹಾಕಿದರು. ಗಲಾಟೆ ಮಧ್ಯದಲ್ಲೇ ಹೊರಟ್ಟಿ ಅವರನ್ನು ಸಭಾಪತಿಗಳು ಮಾತಿಗೆ ಆಹ್ವಾನಿಸಿದರು.

12